ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ

ನಂ.ಪಿ&ಎಸ್/ಎಸ್‌ಟಿಎ/ಸಿಆರ್-9/2010-11

ಕಾರ್ಮಿಕ ಆಯುಕ್ತರ ಕಛೇರಿ
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ
ಬೆಂಗಳೂರು-29, ದಿನಾಂಕ: 06-06-2018.

## ಕಛೇರಿ ಆದೇಶ

**ವಿಷಯ:**-ಇ-ಕಾರ್ಮಿಕ ತಂತ್ರಾಂಶದಡಿ ನೊಂದಣಿ, ನವೀಕರಣ ಮತ್ತು ತಿದ್ದುಪಡಿಗೆ ಸಂಬಂಧಿಸಿದ ಶುಲ್ಕವನ್ನು ಖಜಾನೆ-2 ಮೂಲಕವೇ ಪಾವತಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ರಡಿ ಅಭಿವೃದಿಪಡಿಸಲಾಗಿರುವ "ಇ-ಕಾರ್ಮಿಕ" ತಂತ್ರಾಂಶದಡಿ ನೋಂದಣಿ, ನವೀಕರಣ ಹಾಗೂ ತಿದ್ದುಪಡಿಗೆ ಸಂಬಂಧಿಸಿದ ಶುಲ್ಕವನ್ನು ಈವರೆಗೂ ಎಸ್.ಬಿ.ಐ ಶಿವಾಜಿನಗರ ಶಾಖೆಯಲ್ಲಿ ಇಲಾಖೆಯು ಹೊಂದಿರುವ ಖಾತೆ ಸಂಖ್ಯೆ 64099993360 ಮೂಲಕ ಪಾವತಿಸಲಾಗುತ್ತಿತ್ತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಖಜಾನೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04-05-2018 ರಂದು ನಡೆದ ಸಭೆಯಲ್ಲಿ ಎಲ್ಲ ಕಾಯ್ದೆಗಳಡಿ ನಿಗಧಿತ ಶುಲ್ಕವನ್ನು ಖಜಾನೆ- 2 ಮೂಲಕವೇ ಪಾವತಿಸುವಂತೆ ನಿರ್ದೇಶಿಸಿರುತ್ತಾರೆ. ಅದರಂತೆ, ಇ-ಕಾರ್ಮಿಕ ತಂತ್ರಾಂಶದಲ್ಲಿ ಈವರೆಗೂ ನೋಂದಣಿ, ನವೀಕರಣ ಹಾಗೂ ತಿದ್ದುಪಡಿಗೆ ನಿಗಧಿತ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಇಲಾಖೆಯ ಖಾತೆ ಸಂಖ್ಯೆ 64099993360 ಮೂಲಕ ಪಾವತಿಸುವ ಬದಲಾಗಿ, ಖಜಾನೆ-2 ಮೂಲಕವೇ ಪಾವತಿಸುವಂತೆ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

PHS (M)

ಆದ್ದರಿಂದ ಖಜಾನೆ-2 ಜಾಲತಾಣ **https://k2.karnataka.gov.in/wps/portal/Khajane II/ Scope/ Remittance/Challan Generation** ದ ಮೂಲಕ ಈ ಕಾಯ್ದೆಯಡಿ ನೋಂದಣಿ, ನವೀಕರಣ ಹಾಗೂ ತಿದ್ದುಪಡಿ ಶುಲ್ಕವನ್ನು ಸದರಿ ಕಾಯ್ದೆಯ ಲೆಕ್ಕ ಶೀರ್ಷಿಕೆ-0230-00-101-0-01 ಗೆ ಪಾವತಿಸಲು ಸಂಬಂಧಿಸಿದ ಮಾಲೀಕರು / ನಿಯೋಜಕರಿಗೆ ಸೂಕ್ತ ಮಾಹಿತಿ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ.

Chaitra 08/06/18
ಆಯುಕ್ತರು
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ

ಗೆ :
ಎಲ್ಲಾ ಕಾರ್ಮಿಕ ಅಧಿಕಾರಿಗಳು – ತಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಎಲ್ಲಾ ಕಾರ್ಮಿಕ ನಿರೀಕ್ಷಕರುಗಳಿಗೆ ಈ ಬಗ್ಗೆ ತಿಳಿಸುವುದು.

***ಪ್ರತಿಯನ್ನು ಮಾಹಿತಿಗಾಗಿ*** :
1] ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ – 1, 2, ಬೆಂಗಳೂರು, ಹಾಸನ, ಬೆಳಗಾಂ, ಗುಲ್ಬರ್ಗ
2] ವ್ಯವಸ್ಥಾಪಕರು, ಅಧೀಕ್ಷಕರು, ವಿಷಯ ನಿರ್ವಾಹಕರು ಎಸಿಟಿ 4, 6, 4, ಲೆಕ್ಕಪತ್ರ ಶಾಖೆ

12/6/18

Scanned by CamScanner